ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬಂಟ್ವಾಳ ತಾಲ್ಲೂಕಿನ ಕರಪಾಡಿ ಅಣೆಕಟ್ಟು

೪೧೧. ಶ್ರೀ ಬಿ. ರಮಾನಾಥ ರೈ (ಬಂಟ್ವಾಳ).— ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಟ್ವಾಳ ತಾಲ್ಲೂಕಿನಲ್ಲಿ ನಿರ್ಮಾಣವಾಗುತ್ತಿರುವ ಕರಪಾಡಿ ಅಣೆಕಟ್ಟಿನಿಂದ ಮುಳುಗಡೆಯಾಗುವ ಕೃಷಿ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು ?

ಆ) ಈ ಯೋಜನೆಯಿಂದ ಹಾನಿಗೊಳಗಾಗಲಿರುವ ಕುಟುಂಬಗಳ ಒಟ್ಟು ಸಂಖ್ಯೆ ಎಷ್ಟು ?

ಇ) ಹಾನಿಗೊಳಗಾಗಲಿರುವ ಕುಟುಂಬಗಳಿಗೆ ಶಾಶ್ವತ ಪರಿಹಾರವಾಗಿ ಸರ್ಕಾರವು ಕೈಗೊಳ್ಳಲಿರುವ ಯೋಜನೆಗಳೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ನೀರಾವರಿ, ಲೋಕೋಪಯೋಗಿ ಮತ್ತು ಇಂಧನ ಸಚಿವರು).—

ಅ) ಒಟ್ಟು ೨೮೦.೦೬ ಹೆಕ್ಟೇರುಗಳು (೬೯೧.೭೮ ಎಕರೆಗಳು)

ಆ) ೬೪ (ಜನಸಂಖ್ಯೆ : ೪೪೫)

ಇ) ಸರ್ಕಾರದ ಆದೇಶದ ಸಂಖ್ಯೆ ಪಿತಬ್ಲ್ಯೂಡಿ ೨೮೨ ಪಿಪಿಸಿ ೮೫ ದಿನಾಂಕ ೨೪-೧೨-೧೯೮೫ರ ಪ್ರಕಾರ ಬಾಧಿಸಲ್ಪಡುವ ಕುಟುಂಬಗಳಿಗೆ ಕಳೆದುಕೊಂಡ ಜಮೀನುಗಳಿಗನುಗುಣವಾಗಿ ಪುನರ್ವಸತಿ ಅನುದಾನವನ್ನು ನಿಡಲಾಗುವುದು. ಇದಲ್ಲದೆ ಪುನರ್ವಸತಿ ಕೇಂದ್ರವನ್ನು ಸ್ಥಾಪಿಸಲಾಗುವುದು. ಈ ಪುನರ್ವಸತಿ ಕೇಂದ್ರ ಜನಜೀವನಕ್ಕೆ ಬೇಕಾಗುವ ಅತ್ಯವಶ್ಯಕ ಸೌಲಭ್ಯಗಳನ್ನು ಹೊಂದಿರುತ್ತದೆ. ಈ ಪುನರ್ವಸತಿ ಕೇಂದ್ರದಲ್ಲಿ ಬಾಧಿಸಲ್ಪಡಲಿರುವ ಕುಟುಂಬಗಳಿಗೆ ಮನೆ ಕಟ್ಟಿಸಿಕೊಳ್ಳುವ ಸಲುವಾಗಿ ತಲಾ ಒಂದು ನಿವೇಶನವನ್ನು ಉಚಿತವಾಗಿ ಕೊಡಲಾಗುವುದು.

ಮಾಂಜಾ ನೀರಾವರಿ ಯೋಜನೆ

೪೬೩. ಡಾ: ವಿಜಯಕುಮಾರ್ ಮಿಂಡ್ಕೆ (ಭಾಲ್ಕಿ).—ಮಾನ್ಯ ನೀರಾವರಿ, ಲೋಕೋಪಯೋಗಿ ಹಾಗೂ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಸರ್ಕಾರದ ಬಳಿ ಮಾಂಜಾ ನದಿಗೆ ಅಡ್ಡಲಾಗಿ ಬೀದರ್ ಜಿಲ್ಲೆಯಲ್ಲಿ ಯಾವುದಾದರೂ ನೀರಾವರಿ ಯೋಜನಾ ನಿರ್ಮಾಣದ ಪ್ರಸ್ತಾವನೆಯು ಇದೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಯೋಜನೆಯ ಅನ್ವೇಷಣಾ ಕಾರ್ಯವು ಪ್ರಗತಿಯಲ್ಲಿದೆ

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಎರಡನೆಯ ಪಟ್ಟಿಯನ್ನು ಸಭೆಯ ಮುಂದಿಡುವುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸಲಾಗುವ ಎಂಟನೆಯ ಪಟ್ಟಿಯಲ್ಲಿನ ೩೩ ಪ್ರಶ್ನೆಗಳಲ್ಲಿ ೩೨ನ್ನು ಹೊರತುಪಡಿಸಿ, ೩೦ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ರಾಷ್ಟ್ರೀಯ ನೀರು ನಿರ್ವಹಣಾ ಸಂಸ್ಥೆಯಿಂದ ಕೈಗೊಂಡ ನೀರಾವರಿ ಯೋಜನೆಗಳ ಬಗ್ಗೆ

೧೦೩. ಶ್ರೀ ಜಿ. ರಾಜಾಗೌಡ (ಮಸ್ಕಿ).—ಮಾನ್ಯ ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಷ್ಟ್ರೀಯ ನೀರು ನಿರ್ವಹಣಾ ಸಂಸ್ಥೆಯಿಂದ ಸರ್ಕಾರವು ಎಷ್ಟು ನೀರಾವರಿ ಯೋಜನೆಗಳನ್ನು ಮಂಜೂರಾತಿ ಪಡೆದಿದೆ ?